

# ಮಿಸ್ಟರಿ ಸ್ಪಾಟ್

ಅಮೆರಿಕಾದ ಕ್ಯಾಲಿಫೋರ್ನಿಯಾದಲ್ಲಿರುವ 'ಮಿಸ್ಟರಿ ಸ್ಪಾಟ್' ಅಥವಾ ಐನ್‌ಸ್ಟೀನ್‌ನ 'ಸಾಪೇಕ್ಷ ಸಾಂದ್ರತೆ' ಥಿಯರಿಗೇ ಒಂದು ಸವಾಲು.

ಸಾಂತಾಕ್ರೂಸ್‌ನ ಹೊರವಲಯದ 'ರೆಡ್‌ವುಡ್' ಕಾಡುಗಳಲ್ಲಿರುವ ಈ ಸ್ಥಳದ ಸುತ್ತಳತೆ 150 ಅಡಿ. ಈ ಸ್ಥಳದಲ್ಲಿ ಗುರುತ್ವಾಕರ್ಷಣೆಯ ಅಸಮತೋಲನ ಅಲ್ಲಿಗೆ ಭೇಟಿ ನೀಡಿದವರನ್ನು ತಬ್ಬಿಬ್ಬು ಮಾಡುತ್ತದೆ. ಈ ಸ್ಥಳದಲ್ಲಿ ನೇರವಾಗಿ ನಿಲ್ಲಲು ಆಗುವುದಿಲ್ಲ; ಯಾರೇ ನಿಂತರೂ ವಾರೆಯಾಗಿಯೇ ನಿಲ್ಲುತ್ತಾರೆ.

1939ರಲ್ಲಿ ಈ ಮಿಸ್ಟರಿ ಸ್ಪಾಟ್‌ಅನ್ನು ಭೂಮಾಪನದ ಸಮೀಕ್ಷಕರು ಪತ್ತೆ ಹಚ್ಚಿದರು. 1940ರಿಂದ ಜನ ವೀಕ್ಷಣೆಗಾಗಿ ಇದನ್ನು ತೆರೆಯಲಾಯಿತು. ಈ 'ರಹಸ್ಯ ಸ್ಥಳವು' ಜಗತ್ತಿನಾದ್ಯಂತ ಪ್ರವಾಸಿಗರನ್ನು ತನ್ನತ್ತ ಸೆಳೆದು ಆಶ್ಚರ್ಯಚಕಿತರನ್ನಾಗಿ ಮಾಡುತ್ತಿದೆ. ಇಲ್ಲಿಗೆ ಭೇಟಿ ನೀಡಿದವರು ರೆಡ್‌ವುಡ್ ಕಾಡುಗಳ ಸೌಂದರ್ಯವನ್ನೂ ಸವಿಯಬಹುದು.

ಈ ಸ್ಥಳದಲ್ಲಿ ಮರದ ಮನೆಯೊಂದನ್ನು ನಿರ್ಮಿಸಿದ್ದಾರೆ. ಇಲ್ಲಿ ನಾವು ದೇಹದ ಸಮತೋಲನವನ್ನು ಕಾಪಾಡಲು ಬಾಗಿದಂತೆ ನಿಲ್ಲಬೇಕಾಗುತ್ತದೆ. ಈ ರಹಸ್ಯ ಸ್ಥಳದಲ್ಲಿ ಎತ್ತರ ಹಾಗು ಕೋನದಲ್ಲೂ ವ್ಯತ್ಯಾಸಗಳನ್ನು ಕಾಣಬಹುದು. ಪ್ರತಿ ವರ್ಷ ಸಾವಿರಾರು ಪ್ರವಾಸಿಗರು ಭೇಟಿ ನೀಡುವ ಈ ಸ್ಥಳ ಕುತೂಹಲದೊಂದಿಗೆ ವಿನೋದವನ್ನೂ ಉಂಟು ಮಾಡುತ್ತದೆ.

■ ಲಾವಣ್ಯ ಗೌರಿ ವೆಂಕಟೇಶ್



